# ಮೌನ ಮಂಟಪ

■ ಡಿ.ಎನ್.ಗೀತಾ

## ಆಧ್ಯಾತ್ಮ, ವರ್ಣಚಿಕಿತ್ಸೆ ಬಗ್ಗೆ ಚರ್ಚೆ

ಹರಿಕೃಷ್ಣರ ಮಾತಿಗೆ ಖುತು ತಲೆದೂಗಿದಳು. 'ಅಪ್ಪಾಜಿ, ನಾನು ಇತ್ತೀಚೆಗೆ ಟಿವಿ ಚಾನೆಲೊಂದರಲ್ಲಿ ಉಸಿರಾಟದ ಕಲೆಯ ಮೂಲಕ ಈ ದೈವೀ ಶಕ್ತಿಯನ್ನು ಪಡೆಯಬಹುದು, ಇಚ್ಛಿತ ಫಲಗಳನ್ನು ಪಡೆಯಬಹುದು ಎಂಬ ವಿಷಯದ ಪ್ರೋಗ್ರಾಂ ಒಂದನ್ನು ನೋಡ್ದೆ, ಇದು ನಿಜಾನಾ ಅಪ್ಪಾಜಿ?..'

ರಮ್ಯ ತಂದೆಯನ್ನು ಪ್ರಶ್ನಿಸಿದಳು.

ಮಾತು ಸ್ವಾರಸ್ಯಕರವಾಗಿ ನಡೆಯುತ್ತಿರುವುದನ್ನು ನೋಡಿ ದೇವಣ್ಣನೂ ತನ್ನ ಕೆಲಸಗಳನ್ನೆಲ್ಲಾ ಬದಿಗಿಟ್ಟು ಬಂದು ಕುಳಿತುಕೊಂಡ.

'ಪರವಾಗಿಲ್ಲ ರಮ್ಯ, ಒಳ್ಳೇ ಸ್ವಾರಸ್ಯಕರವಾದ ಪ್ರಶ್ನೇನೇ ಕೇಳಿದ್ದಿಯಾ, ಉಸಿರಾಟದ ಕಲೆ ಅಂದ್ರೆ ನಿರ್ದಿಷ್ಟ ಪ್ರಾಣಾಯಾಮದ ಮೂಲಕ ದೈವತ್ವಕ್ಕೇರಬಹುದು, ಬಯಸಿದ್ದು ಪಡೆಯಬಹುದು ಎಂಬ ಮಾತುಗಳು ನಿಜಕ್ಕೂ ಹೌದು. ಅಂದರೆ ಸೂರ್ಯನಾಡಿ, ಚಂದ್ರನಾಡಿಯ ಮೂಲಕ ಅರ್ಥಾತ್ ಮೂಗಿನ ಬಲಹೊಳ್ಳೆ ಮತ್ತು ಎಡಹೊಳ್ಳೆಯ ಮೂಲಕ ನಿರಂತರ ಉಸಿರಾಟ ಕ್ರಿಯೆ ನಡೆಸಿದರೆ ಅಪಾರ ಶಕ್ತಿ ಲಭಿಸಿ ದೈವತ್ವಕ್ಕೇರುತಾರೆ ಎನ್ನುವುದನ್ನು ನಾನೂ ಕೇಳಿದ್ದೇನೆ. ಆದರೆ ಆ ಸಾಧನೆ ಮಾಡಲು ಸಾಮಾನ್ಯರಿಂದ ಸಾಧ್ಯವಿಲ್ಲ ರಮ್ಯ, ಏಕೆಂದರೆ ಅವಕ್ಕೆಲ್ಲಾ

